ಡಿಸಿದಂತೆ ತನ್ರದಲ್ಲಿ ಇದನ್ನು ಜಾರಿಯಲ್ಲಿ ತಂದು ಸಾರ್ವಜನಿಕರಿಗೆ ಯಾವುದೇ ಖಾತೆಯಲ್ಲಿ ತೊಂದರೆಯಾಗದಂತೆ ಮಾಡಬೇಕೆಂದು ವಿನಂತಿ.

ಶ್ರೀ ಎ. ಶಂಕರ್ ಆಳ್ವ.— ನಿಮ್ಮ ಸಲಹೆಯನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳುತ್ತೇವೆ.

Scarcity of drinking water in Bijapur District

†ಶ್ರೀ ಎಂ. ಕೆ. ಸುರಪುರ್ (ಧಾರವಾಡ ಗ್ರಾಮಾಂತರ).— ಬಿಜಾಪುರದಲ್ಲಿ ನೀರಿನ ಸಲುವಾಗಿ ಎರಡು ಮಾತು ಹೇಳುತ್ತೇನೆ. ಬಿಜಾಪುರದಲ್ಲಿ ನೀರು ಇಲ್ಲ. ನಮ್ಮ ಕಾಲೇಜು ಪ್ರಿನ್ಸಿಪಾಲ್ ಮತ್ತು ಎಂ. ಎಲ್. ಸಿ. ಗಣಾಚಾರಿಯವರು ಡೆಪ್ಯುಟಿ ಕಮಿಷನರವರಿಗೆ ಇಂಥ ಕಡೆ ನೀರು ಇಲ್ಲ ಬೋರವೆಲ್ಸ್ ತೆಗೆಸಿ ಎಂದು ೧೫-೨-೧೯೭೩ ರಂದು ಕಾಗದ ಬರೆದರು, ೨೨-೩-೧೯೭೩ ರಲ್ಲಿ ಅವರು ಉತ್ತರ ಕೊಡುತ್ತಾರೆ, 'You reffer the matter to Municipal Administrator' ಎಂದು. Municipal Administrator reply ಬರೆಯುತ್ತಾರೆ. 'You approach, Deputy Commissioner' ಎಂದು. ಅವರು ಇವರಿಗೆ, ಇವರು ಅವರಿಗೆ ಬರೆಯುತ್ತಾರೆ. ಎಂ. ಎಲ್. ಸಿ ಮತ್ತು ದೊಡ್ಡ ಸಂಸ್ಥೆಯ ಪ್ರಿನ್ಸಿಪಾಲ್ ಆಗಿರುವವರು ಬರೆದರೆ ಹೀಗೆ ಮಾಡುತ್ತಾರೆ. ಇನ್ನು ಸಾಮಾನ್ಯ ಜನರ ಪರಿಸ್ಥಿತಿ ಏನು ?

ಹಿಂದೆ ಈ ಆಫೀಸರ್ ಟ್ರಾನ್ಸ್‌ಫರ ಸಲುವಾಗಿ ನಾನು ಉಪವಾಸ ಮಾಡಿದ್ದು ನಿಮಗೆ ಸರಿ ಎನಿಸಿಲ್ಲ. ಹೋಗಲಿ ಬಿಡಿ. ಪಿ. ಡಬ್ಲ್ಯು. ಡಿ. ಮಂತ್ರಿಗಳನ್ನು ಕೇಳಿದರೆ ಅವರು ಇದು ಭಾರಿ ನೀರಾವರಿ ಮಂತ್ರಿಗಳಿಗೆ ಸಂಬಂಧಪಟ್ಟದ್ದು ಅವರಿಗೆ ವ್ಯವಸ್ಥೆ ಮಾಡುವುದಕ್ಕೆ ತಿಳಿಸುತ್ತೇವೆ ಎಂದು ಉತ್ತರ ಕೊಟ್ಟರು. ಈ ಕಾಗದವನ್ನು ತಮ್ಮ ಕಡೆಗೆ ಕಳುಹಿಸುತ್ತೆನೆ. ಭಾರಿ ನೀರಾವರಿ ಮಂತ್ರಿಗಳು ಮತ್ತು ರೆವಿನ್ಯೂ ಮಂತ್ರಿಗಳ ಕಡೆ ಕಾಪಿ ಕಳುಹಿಸಿಕೊಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ನಿನ್ನೆ ಹೇಳಿದ್ದೇನೆ. ಇವತ್ತು ರಿಪೀಟ್ ಮಾಡಬೇಡಿ ಎಂದು ಹೇಳುತ್ತೀರಿ. ಹೋದ ಸಾರಿ ಹೇಳಿದೆ, ಬೊಂಬಾಯಿಗೆ ಎಲೆಕ್ಟ್ರಿಸಿಟಿ ಕೊಡಬೇಡಿ ಅವರು ನೀರು ಕೊಡುವುದಿಲ್ಲವೆಂದು. ನೀರು ಬರಲಿಲ್ಲ. ದುಡ್ಡು ಕೊಟ್ಟಿದ್ದು ಹೋಯಿತು. ಈ ಸಾರಿ ಎಲೆಕ್ಟ್ರಿಸಿಟಿ ಕೊಡುತ್ತೀರಿ. ಅವರು ನೀರು ಕೊಡುವುದಿಲ್ಲ. ಬಿಜಾಪುರದ ಆಜುಬಾಜಿನ ೬೦ ಮೈಲಿಯೊಳಗೆ ನೀರು ಇಲ್ಲ. ದೇವರು ಮಾಡಿದ್ದು ನಾವು ಮಾಡಿದ್ದು ಅಲ್ಲ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ನೀವು ಹೇಳುವುದು ಸರಿಯಲ್ಲ. ನೀವು ನೀರು ಕೊಡಲು ಸಾಧ್ಯವಿಲ್ಲದಿದ್ದರೆ ಪೆಂಗಸರನ್ನು, ಮಕ್ಕಳನ್ನು ಮತ್ತು ಬಡವರನ್ನು ಬೇರೆ ಕಡೆಗೆ ಕಳುಹಿಸಿಕೊಡಲು ಎಚ್ಚರಿಕೆ ಕೊಡಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).— ಸುರಪುರದ ಮಲ್ಲಪ್ಪನವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ. ಅದು ನಾವು ಮಾಡಿದ್ದು ಅಲ್ಲ. ದೈವದತ್ತವಾಗಿ ಮಳಿಹೋಗಿ ಕೃಷ್ಣಾ ನದಿಯಲ್ಲಿ ನೀರು ಇಲ್ಲದೇ ತೊಂದರೆಯಾಗಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).— ದೇವರೇ ಇಲ್ಲ ಎಂದು ನೀವು ಹೇಳುತ್ತೀರಿ

ಶ್ರೀ ಎಚ್. ಎಂ. ಚನ್ನಬಸಪ್ಪ.— ದೇವರು ಇಲ್ಲ ಎನ್ನುವುದು ಅಲ್ಲ. ನನಗೆ ಇದೆ. ಅಂತೂ ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ ಇರುವಾಗ ಸರ್ಕಾರಕ್ಕೆ ದೇವರು ಇದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ.— ನಿಮ್ಮ ಮಂತ್ರಿಮಂಡಲದಲ್ಲಿ ದೇವರ ಮೇಲೆ ನಂಬಿಕೆಯಿಲ್ಲ ಎನ್ನುವ ಮಂತ್ರಿಗಳು ಇರುವಾಗ ಮಂತ್ರಿಗಳ ಬಗ್ಗೆ ಜನಗಳಲ್ಲಿ ವಿಶ್ವಾಸ, ನಂಬಿಕೆ, ಗೌರವ ಎಲ್ಲಿ ಇರುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ ಇರುವುದು. ಆದುದರಿಂದ ಸರ್ಕಾರದ ಅಭಿಪ್ರಾಯ ದೇವರು ಇದ್ದಾನೆ ಎನ್ನತಕ್ಕದ್ದು, ದೇವರಲ್ಲಿ ನಂಬಿಕೆ ಇದೆ ಎಂದು ಇಟ್ಟುಕೊಳ್ಳಬೇಕು.

ಶ್ರೀ ಟಿ. ಎಂ. ಮಂಜುನಾಥ್.— ಒಬ್ಬ ಮಂತ್ರಿ ದೇವರಿಲ್ಲ ಎಂದು ಹೇಳುತ್ತಾರೆ, ಒಬ್ಬ ಮಂತ್ರಿ ದೇವರು ಇದ್ದಾನೆ ಎಂದು ಹೇಳುತ್ತೀರಿ. ಅದರ ಬಗ್ಗೆ ಹೊರಗಡೆ ಹೋಗಿ ಪ್ರಾಪಗ್ಯಾಂಡ ಕೂಡ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಈ ಸದನದಲ್ಲಿ ದೇವರು ಇಲ್ಲ.

1-30 P.M.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).— ಮುಖ್ಯ ಮಂತ್ರಿಗಳು ಇದೇ ವಿಷಯದ ಮೇಲೆ ಮಾತನಾಡುತ್ತಾ, ದೇವರ ಪರವಾಗಿಯೂ ಇಲ್ಲ, ದೇವರ ವಿರುದ್ಧವೂ ಇಲ್ಲ, ಸರ್ಕಾರ ಎನ್ನುವುದು ಇವೆಲ್ಲಕ್ಕಿಂತಲೂ ಅತೀತವಾದ್ದು, ಯಾರು ಬೇಕಾದರೂ ನಂಬಿಕೆ ಇಟ್ಟುಕೊಳ್ಳಲಿ, ಯಾರು ಬೇಕಾದರೂ ನಂಬಿಕೆ ಇಟ್ಟುಕೊಳ್ಳದೇ ಇರಲಿ ಎನ್ನುವ ರೀತಿ ಹೇಳಿದರು- ಶ್ರೀಮಾನ್ ಚನ್ನಬಸಪ್ಪನವರು ಹೇಳುತ್ತಾರೆ, ಸರ್ಕಾರಕ್ಕೆ ದೇವರ ಮೇಲೆ ನಂಬಿಕೆ ಎಂದು. ಚೀಫ್ ಮಿನಿಸ್ಟರ್ ಮಾತು ನಂಬಬೇಕೇ, ಚನ್ನಬಸಪ್ಪನವರ ಮಾತು ನಂಬಬೇಕೇ, ಅರ್ಥವಾಗುವುದಿಲ್ಲ ತಾಯಿ, ನನಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು.— ನಾನು ಹೇಳಿದ ಹಾಗೆ ಕೇಳಿದರೆ ನಿಮಗೆ ರಕ್ಷಣೆ ಸಿಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನೀರನ್ನು ಹೋದ ತಡವೆ ಬಿಟ್ಟಿದ್ದಕ್ಕೂ, ಈ ತಡವೆ ಬಿಟ್ಟಿದ್ದಕ್ಕೂ ವ್ಯತ್ಯಾಸವಿದೆ. ಹೋದ ತಡವೇ ನೀರು ನಮಗೆ ಬರಲೇ ಇಲ್ಲ. ಕಾರಣ, ಮಹಾರಾಷ್ಟ್ರದಲ್ಲಿ ಇರತಕ್ಕ ಲಿಫ್ಟ್ ಇರಿಗೇಟರ್ಸ್ ಬಿಟ್ಟ ನೀರು ಉಪಯೋಗಮಾಡಿ ನೀರು ನಮಗೆ ತಲುಪುವುದೇ ಕಷ್ಟವಾಯಿತು. ಅವರನ್ನು ಹತೋಟಿ ಮಾಡುವುದು ಕಷ್ಟವಾಯಿತು. ಈ ಸಾರಿ ಮಹಾರಾಷ್ಟ್ರ ಸರ್ಕಾರದವರು ನೀರನ್ನು ಉಪಯೋಗ ಮಾಡದಂತೆ ಪ್ರತಿಬಂಧಕಮಾಡಿ ವೈಸಾಳ ಬೌಂಡರಿಯಲ್ಲಿ ಅಳತೆಮಾಡಿ ನೀರು ಬಿಟ್ಟದ್ದಾರೆ. ನೀರು ಬರುತ್ತಾ ಇದೆ. ನದಿಯಲ್ಲಿ ಒಣಗಿ ಹೋಗಿರುವುದರಿಂದ ಅಲ್ಲಲ್ಲಿ ಹಳ್ಳಗಳು, ಕೊಳ್ಳಗಳು, ಪಿಟ್ಸ್ ಇರುವುದರಿಂದ ಅವು ತುಂಬು ತುಂಬಿ ಬರಬೇಕು. ಮೊನ್ನೆಯ ದಿವಸ ಹೇಳಿದಂತೆ, ೧೨ ನೇ ತಾರೀಖು ಬೆಳಿಗ್ಗೆ ೭ ಗಂಟೆ ಹೊತ್ತಿಗೆ ವೈಸಾಳದಿಂದ ೩೫ ಮೈಲಿ ಬಂದಿದೆ. ಈವೊತ್ತು ಎಷ್ಟು ಬಂದಿದೆ ಎನ್ನುವ ವಿಚಾರವನ್ನು ತಿಳಿಸಲಿಕ್ಕೆ ವ್ಯವಸ್ಥೆಮಾಡಿದೆ. ನೀರು ಬರತಕ್ಕದ್ದು ನಿಧಾನ ಎನ್ನುವುದು ಸ್ವಾಭಾವಿಕ. ಬಿಜಾಪುರದಲ್ಲಿ ನೀರಿಗೆ ತೊಂದರೆ ಯಾಗಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ತಿಳಿಸಿದರು. ಈಗ ನಮ್ಮಲ್ಲಿರಿಗ್ಸೆ ಕೂಡ ಎಷ್ಟುಪ್ರಮಾಣದಲ್ಲಿ ಅವಶ್ಯಕವೋ, ಅಷ್ಟು ಪ್ರಮಾಣದಲ್ಲಿ ಇಲ್ಲ. ಕೊಯ್ನದಿಂದ ಬಿಟ್ಟರತಕ್ಕ ನೀರು ಬರತಕ್ಕದ್ದು ನಿಧಾನವಾಗುತ್ತಿದೆ. ಅದನ್ನು ತೀವ್ರಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಕ್ಷಣ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಕೃಷ್ಣಾನದಿಯಿಂದ ನೀರನ್ನು ಒದಗಿಸುವುದು ಅಸಾಧ್ಯವಾದರೆ, ಬೇರೆ ಮಾರ್ಗ ಇಲ್ಲದೆಹೋದರೆ, ಕೊನೆಗೆ ಟ್ರಕ್‌ಗಳಲ್ಲಿ ಮತ್ತು ಟ್ಯಾಂಕರಗಳಲ್ಲಿ ನೀರನ್ನು ಸರಬರಾಜುಮಾಡಿ, ತೊಂದರೆಯಾಗದಂತೆ ನೋಡಿಕೊಳ್ಳುವುದಕ್ಕೆ ಆಜ್ಞೆ ಮಾಡುತ್ತೇನೆ, ಇಷ್ಟು ಮಾತ್ರ ಭರವಸೆ ಕೊಡುತ್ತೇನೆ.

ಶ್ರೀ ಪಿ. ಎಂ. ಬಂಗಿ.— ಕೃಷ್ಣ ನದಿಯೊಳಗೆ ೧೦—೨೦ ಮೈಲಿ ಬ್ಯಾರೇಜ ಕಟ್ಟಿ ನಿರಂತರವಾಗಿ ನೀರು ದೊರೆಯುವ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ತತ್ವಶಃ ಸರ್ಕಾರ ಅದನ್ನು ಒಪ್ಪಿಕೊಂಡಿದೆ. ಈಗ ಏನು ಸ್ಥಿತಿಗತಿ ಬಂದಿದೆ, ಅದು ಮುಂದೆ ಬರಬಾರದು. ಅಲ್ಲಲ್ಲಿ ಬಂಡಾರಗಳನ್ನು ಎಬ್ಬಿಸಿ, ಮಳೆಗಾಲ ಬಂದಾಗ ಆಲ್ಲಿ ಶಾಶ್ವತವಾಗಿ ನೀರು ನಿಂತು, ಬೇಸಿಗೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಇದನ್ನು ತತ್ವಶಃ ಒಪ್ಪಿ ಆಜ್ಞೆ ಮಾಡಿದ್ದೇವೆ. ಟೆಂಪರರಿ ಬಂಡು ಹಾಕಿ ಮುಂದೆ ಒಂದೊಂದನ್ನು ಪರ್ಮನೆಂಟ್ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ.